ಆ) ಹಾಗಿದ್ದಲ್ಲಿ, ಈ ರಸ್ತೆಯ ಅಕ್ಕಪಕ್ಕದಲ್ಲಿ ಇರುವ ಜಮೀನನ್ನು ವಶಪಡಿಸಿಕೊಳ್ಳಲು ಸರ್ಕಾರದವರು ಕ್ರಮ ಕೈಗೊಂಡಿರುವರೆ?

ಇ) ಹಾಗಿಲ್ಲದಿದ್ದಲ್ಲಿ ಎಂದು ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಇದೆ

ಆ) ಇಲ್ಲಾ

ಇ) ಕೇಂದ್ರ ಸಾರಿಗೆ ಮಂತ್ರಾಲಯದವರಿಂದ ಅನುಮೋದನೆ ದೊರೆತ ನಂತರ ಕಾರ್ಯಗತಗೊಳಿಸಲಾಗುವುದು.

12.00 ನೂನ್

ಶ್ರೀ ಸಿ. ವೀರಭದ್ರಯ್ಯ : ಮಾನ್ಯ ಅಧ್ಯಕ್ಷರೇ, ನೆಲಮಂಗಲ - ತುಮಕೂರು ರಸ್ತೆಯಲ್ಲಿ ದಿನಬೆಳಗಾದರೆ 2-3 ಅಪಘಾತಗಳು ಆಗುತ್ತವೆ. ರಸ್ತೆ ಅಗಲ ಇಲ್ಲದೇ ಇರುವುದರಿಂದ ಅನೇಕ ಅಪಘಾತಗಳು ಆಗುತ್ತವೆ. ಕಳೆದ ಸಾರಿ ಈ ಪ್ರಶ್ನೆಯನ್ನು ಹಾಕಿದಾಗ ಸರ್ಕಾರ ಇದು ಆಲೋಚನೆಯಲ್ಲಿದೆ ಎಂದು ಹೇಳುತ್ತಿದ್ದರು. ಕಾರ್ಯಕ್ರಮ ಏನೂ ತೆಗೆದುಕೊಂಡಿಲ್ಲ. ದಿನಬೆಳಗಾದರೆ 10-15 ಅಪಘಾತಗಳು ಆಗಿ ಜನರು ಸಾಯುತ್ತಿದ್ದಾರೆ. ಸರ್ಕಾರಕ್ಕೆ ತಮ್ಮ ಮೂಲಕ ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನು ಅಗಲ ಮಾಡಬೇಕೆಂದು ಕೇಳುತ್ತಿದ್ದೇನೆ. ರಸ್ತೆ ಅಗಲ ಮಾಡಲಿಕ್ಕೆ ಅಕ್ಕಪಕ್ಕದ ಜಮೀನು ಅಕ್ವೈರ್ ಆಗಿದೆಯೇ ಎಂದು ಕೇಳುತ್ತಿದ್ದೇನೆ. ದಯಮಾಡಿ ಮಾನ್ಯ ಮಂತ್ರಿಗಳು ಈ ಬಗ್ಗೆ ಸರಿಯಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಅಲ್ಲಿ ಡಬ್ಬಲ್ ರಸ್ತೆ ಆಗದಿದ್ದರೆ ಅಲ್ಲಿ ಪ್ರಯಾಣ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ದ್ವಿಬದಿಯ ರಸ್ತೆ ಆಗಬೇಕೆಂದು ಸರ್ಕಾರ ಕೇಂದ್ರಸರ್ಕಾರದ ಜೊತೆಯಲ್ಲಿ ವ್ಯವಹಾರ ನಡೆಸುತ್ತಿದ್ದೇವೆ. ಬೆಂಗಳೂರಿನಿಂದ ನೆಲಮಂಗಲದವರೆಗೂ ಈಗಾಗಲೇ ಡಬ್ಬಲ್ ರಸ್ತೆಯಿದೆ. ನೆಲಮಂಗಲದಿಂದ ತುಮಕೂರಿನವರೆಗೆ ಡಬ್ಬಲ್ ರಸ್ತೆಯಾಗಬೇಕೆಂದು ಸರ್ಕಾರ ಒತ್ತಾಯ ಮಾಡುತ್ತಿದೆ. ಕೇಂದ್ರ ಸರ್ಕಾರ ಕೂಡ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕಿನ ಯೋಜನೆಯಲ್ಲಿ ಬ್ಯಾಂಕಿನವರು ಅಥವಾ ಜಪಾನ್ ಏಡೆಡ್ ಪ್ಯಾಕೇಜಸ್ ಸ್ಕೀಮ್‌ನಲ್ಲಿ ಮಾಡುತ್ತೇವೆಂದು ಮೊನ್ನೆ ತಾನೇ ಕೇಂದ್ರದ ಮಂತ್ರಿಗಳು ಇಲ್ಲಿ ಬಂದು ನಮ್ಮ ಕೆಲವು ಬೇಡಿಕೆಗಳನ್ನು ಪರಿಶೀಲನೆ ಮಾಡುವಾಗ ಆಶ್ವಾಸನೆ ಕೊಟ್ಟಿದ್ದಾರೆ. ನಮಗೆ ಇದು ಬಹಳ ಜಾಗ್ರತೆಯಾಗಿ ಪ್ರಾರಂಭವಾಗಬೇಕೆಂಬ ಆಸೆ ಇದೆ.

ಶ್ರೀ ಸಿ. ವೀರಭದ್ರಯ್ಯ : ದಿನಾ ಎಷ್ಟು ಪ್ರಾಣಗಳು ಹೋಗಬೇಕೆಂದು ಕಾಯುತ್ತಾ ಇದ್ದೀರಿ? ದಿನಾ 10-15 ಜನ ಸಾಯುತ್ತಿದ್ದಾರೆ. ತುರ್ತಾಗಿ ಮಾಡದಿದ್ದರೆ ತೊಂದರೆಯಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : ಬೇರೆ ಬೇರೆ ಕಾರಣಗಳಿಗೆ ಜನರು ಸಾಯುತ್ತಿದ್ದಾರೆ. ದಿನಾ ನೀವು ಓಡಾಡುತ್ತಾ ಇದ್ದೀರಿ. ನಾವೂ ಸಹ ಓಡಾಡುತ್ತೇವೆ. ಆದರೆ ಆಕ್ಸಿಡೆಂಟುಗಳು ಆಗುವುದೇ ಬೇರೆ ಕಾರಣಕ್ಕೆ. ನೆಲಮಂಗಲ ಮತ್ತು ಬೆಂಗಳೂರು ರಸ್ತೆಯಲ್ಲಿ 4 ಲೈನುಗಳು ಇವೆ. ಅಲ್ಲಿ ಆಕ್ಸಿಡೆಂಟುಗಳು ಆಗುತ್ತಿಲ್ಲವೇ?

ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಹಾಗೂ ದೂಡವಾಡ ಸರ್ಕಾರಿ ಜೂನಿಯರ್ ಕಾಲೇಜು ಕಟ್ಟಡ ಕಟ್ಟುವ ಬಗ್ಗೆ

549 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೂಡವಾಡ ಮತ್ತು ನೇಸರಗಿ ಸರ್ಕಾರಿ ಜೂನಿಯರ್ ಕಾಲೇಜು ಕಟ್ಟಡ ಕಟ್ಟಲು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಎಂದು ಹೊರಡಿಸಲಾಯಿತು?

ಅ) ಈ ಕಟ್ಟಡ ಕಟ್ಟುವ ಕೆಲಸಕ್ಕೆ ಗುತ್ತಿಗೆದಾರರು ಬರದೇ ಇರುವ ವಿಷಯ ನಿಜವೇ?

ಇ) ಈ ಕಟ್ಟಡಗಳನ್ನು ಇಲಾಖೆವತಿಯಿಂದ ಕಟ್ಟಲು ಒಪ್ಪಿಗೆ ನೀಡಲಾಗುವುದೇ

ಈ) ಈ ಕಟ್ಟಡಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ ಈ ಕಟ್ಟಡಗಳನ್ನು ಕಟ್ಟಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ)		ಆಡಳಿತಾತ್ಮಕ ಮಂಜೂರಾತಿ	ತಾಂತ್ರಿಕ ಮಂಜೂರಾತಿ
1)	ದೂಡವಾಡ	22-3-93	16-8-93
2)	ನೇಸರಗಿ	22-3-93	9-9-93

ಅ) ನಿಜ

ಇ) ನೀಡಲಾಗುವುದು

ಈ) ಬಂದಿದೆ

ಉ) ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್. ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಈ ಕಾಲೇಜು ಕಟ್ಟಡವನ್ನು ಇಲಾಖೆಯ ವತಿಯಿಂದ ಕಟ್ಟಲಿದ್ದೇವೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಇಲಾಖೆಯ ವತಿಯಿಂದ ಕಟ್ಟಡ ಕಟ್ಟಲು ಎಷ್ಟು ದಿವಸಗಳಲ್ಲಿ ಮಾಡಲಾಗುವುದು? ಎರಡನೆಯದು, ಇವತ್ತಿನ ದಿವಸ ಗುತ್ತಿಗೆದಾರರು ಮುಂದೆ ಬರುತ್ತಿಲ್ಲವೆಂದರೆ ಮುಖ್ಯ ಇಂಜಿನಿಯರ್ ಇದ್ದವರು ಶಿಕ್ಷಣ ಹೆಡ್ ಮತ್ತು ಟೂರಿಸಂ ಹೆಡ್‌ಗೆ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಶಿಕ್ಷಣ ಮತ್ತು ಯುವಜನ ಸೇವೆ ಟೂರಿಸಂ ಹೆಡ್‌ಗೆ ಹಣ ಬಿಡುಗಡೆ ಮಾಡದ ಕಾರಣ ಗುತ್ತಿಗೆದಾರರು ಮುಂದೆ ಬರುತ್ತಿಲ್ಲ. ಈ ಹೆಡ್‌ಗಳಿಗೆ ಹಣವನ್ನು ಬಿಡುಗಡೆ ಮಾಡಲು ತಾವು ಮುಖ್ಯ ಇಂಜಿನಿಯರ್‌ರವರಿಗೆ ಆದೇಶ ನೀಡುತ್ತೀರಾ? ಮೂರನೆಯದಾಗಿ ಗುತ್ತಿಗೆದಾರರು ಮುಂದೆ ಬಾರದೆ ಇರುವುದಕ್ಕೆ ಕಾರಣ ಸಿಮೆಂಟ್ ಮತ್ತು ಸ್ಟೀಲ್ ಇತ್ಯಾದಿಗಳನ್ನು ಗುತ್ತಿಗೆದಾರರು ತರಬೇಕೆಂದು ನಿಯಮವಿದೆ. ಸರಿಯಾದ ಸಮಯಕ್ಕೆ ಎಲ್‌ಒಸಿ ಬರುತ್ತಿಲ್ಲ. ಅವರು ರೊಕ್ಕ ಹಾಕಿ ಎಲ್ಲವನ್ನೂ ತರಬೇಕು. ಮೊದಲು ಇದ್ದಹಾಗೆ ಡಿಪಾರ್ಟ್‌ಮೆಂಟ್‌ನವರೇ ಸಿಮೆಂಟ್ ಮತ್ತು ಕಬ್ಬಿಣವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಹೆಚ್. ರಂಗನಾಥ್ : ಕಟ್ಟಡಗಳನ್ನು ಕಟ್ಟಲು ಖಾಸಗಿ ಗುತ್ತಿಗೆದಾರರು ಹೆಚ್ಚು ಮುಂದೆ ಬರುತ್ತಿಲ್ಲ. ರಸ್ತೆಯ ಕೆಲಸಕ್ಕೆ ಬಹಳ ಜಾಗ್ರತೆಯಾಗಿ ಬರುತ್ತಾರೆ. ಅದರಲ್ಲೂ ಮಣ್ಣಿನ ಕೆಲಸವೆಂದರೆ ಬಹಳ ಜಾಗ್ರತೆಯಾಗಿ ಬರುತ್ತಾರೆ. ಅದು ಏನೋ ಅವರಿಗೆ ಯಾವುದು ಅನುಕೂಲವಿದೆಯೋ ಅದನ್ನು ಅವರು ಮಾಡುತ್ತಾರೆ. ನಾವು ಇಂತಹದ್ದೇ ಮಾಡಿಯೆಂದು ಹೇಳುವುದಕ್ಕಾಗುವುದಿಲ್ಲ ಆ ಅಧಿಕಾರ ನಮಗೆ ಇಲ್ಲ. ಕಟ್ಟಡ ಕಟ್ಟುವುದು ತಡವಾಗುತ್ತಿದೆ ಎನ್ನುವುದನ್ನು ಒಪ್ಪುತ್ತೇನೆ. ಅದಕ್ಕೆ ಈ ವರ್ಷ ಎರಡು ಕಟ್ಟಡಗಳಿಗೆ ಅನುದಾನ ಕೊಟ್ಟಿದ್ದೇವೆ. ಅದಕ್ಕೆ ಅಡ್ಮಿನಿಸ್ಟ್ರೇಷನ್ ಅಪ್ರೂವಲ್ ಕೊಡಲಾಗಿದೆ. ಹಿಂದೆ ಸರ್ಕಾರ ಸಿಮೆಂಟ್ ಮತ್ತು ಕಬ್ಬಿಣವನ್ನು ಒದಗಿಸತಕ್ಕ ಒಂದು ಕಾರ್ಯಕ್ರಮವಿತ್ತು ಅದನ್ನು ಕಾರಣಾಂತರಗಳಿಂದ ನಿಲ್ಲಿಸಿದ್ದಾರೆ. ಮತ್ತೆ ಸರ್ಕಾರ ಪರಿಶೀಲನೆ ಮಾಡಿ 1 ಕೋಟಿವರೆಗೆ ಅದರ ಕೆಳಗೆ ಬರತಕ್ಕ ಕಾಮಗಾರಿಗಳಿಗೆ

ಸಿಮೆಂಟ್ ಮತ್ತು ಕಬ್ಬಿಣವನ್ನು ಒದಗಿಸಬೇಕೆಂದು ಈಗಾಗಲೇ ಸರ್ಕಾರ ತೀರ್ಮಾನ ತೆಗೆದುಕೊಂಡು ಆದೇಶ ಕೊಡಲಾಗಿದೆ. ಮಾನ್ಯ ಸದಸ್ಯರು ಹೇಳುವ ಎರಡು ಕಟ್ಟಡಗಳು ಶೀಘ್ರವಾಗಬೇಕೆಂದು ಏನು ಆಸೆಯಿದೆ ಅದು ಆದಷ್ಟುಬೇಗ ಪೂರ್ಣವಾಗುತ್ತವೆ.

ಶ್ರೀ ಎಸ್.ಹೆಚ್. ಕೌಜಲಗಿ : ಆ ಕಟ್ಟಡಗಳು ಎಷ್ಟು ದಿವಸದೊಳಗೆ ಆಗುತ್ತವೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಸದಸ್ಯರು ಚುನಾವಣೆಗೆ ಹೋಗುವುದರಲ್ಲಿ ಆಗುತ್ತವೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ, ತಮ್ಮ ಪ್ರಶ್ನೆಗೆ ಮಂತ್ರಿಗಳು ಸಮಯ ಕೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ತಮ್ಮನ್ನು ಕೇಳುತ್ತೇನೆ, ಉತ್ತರವನ್ನು ಆಮೇಲೆ ಕೊಡಿಸಿ. ಅಲ್ಲಿ ಏನಾದರೂ ಉತ್ತರ ಕೊಡುವುದಕ್ಕೆ ಆಗದಿದ್ದರೆ ತಾವು ನಮ್ಮ ರಕ್ಷಣೆಗೆ ಬರಬೇಕು. ಅಪರೂಪಕ್ಕೆ ನಮ್ಮದು ಒಂದು ಪ್ರಶ್ನೆ ಬರುತ್ತದೆ. ನಾನು ಏನು ಪ್ರಶ್ನೆ ಕೇಳಿದ್ದೇನೆ? ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು? ಅದಕ್ಕೆ ಏನು ಉತ್ತರ ತರಿಸಬೇಕು ಸ್ವಾಮಿ? ವಿಶೇಷ ದುರಸ್ತಿಯಿಂದ ಕೆರೆಗಳ ಹೂಳು ತೆಗೆಯುತ್ತೀರಾ? ಇದು ಸಣ್ಣ ಪ್ರಶ್ನೆ ಇದೆಲ್ಲ ರೆಕಾರ್ಡ್‌ನಲ್ಲಿರುತ್ತದೆ ಅದಕ್ಕೂ ಉತ್ತರ ಕೊಡುವುದಿಲ್ಲವೆಂದರೆ ಅದಕ್ಕೆ ಉತ್ತರ ಬಂದಿಲ್ಲವೆಂದರೆ ನಾವು ಏಕೆ ಪ್ರಶ್ನೆ ಕೇಳಬೇಕು? ನಾವು ಇಲ್ಲಿ ಕೆಲಸ ಮಾಡುವುದು ಹೇಗೆ? ತಮಗೆ ಗೊತ್ತಿದೆ ಖುಷ್ಕಿ ಜಮೀನು ಹೊಂದಿರುವವರಿಗೆ ಬಹಳ ತೊಂದರೆಯಿದೆ. ಕೃಷ್ಣಾ ಕಾವೇರಿಯ ಹಾಗೆ ದೊಡ್ಡ ನೀರಾವರಿ ಏನೂ ಇಲ್ಲ. ರೈತರಿಗೆ ಅನುಕೂಲವಾಗುವಂತೆ ಕೆರೆಕಟ್ಟೆಗಳು ರಿಪೇರಿಯಾಗಬೇಕು ಅವುಗಳಲ್ಲಿನ ಹೂಳನ್ನು ತೆಗೆಸಬೇಕು ಇದು ಬಹಳ ಪ್ರಮುಖವಾದ ಪ್ರಶ್ನೆ ಇದಕ್ಕೆ ಯಾವಾಗ ಉತ್ತರ ಕೊಡಿಸುತ್ತೀರಿ? ಖುಷ್ಕಿ ಜಮೀನು ಮಾಡುವವರಿಗೆ ಒಂದು ರೀತಿಯ ಜೀವನಾಡಿ ಇದ್ದಹಾಗೆ ಹೂಳು ತೆಗೆಯದೆ ಕಣ್ಣುಮುಚ್ಚಿ ಕುಳಿತಿದ್ದಾರೆ. ಉತ್ತರ ಕೊಡಿ ನನಗೆ. ನನಗೆ ಅಂಕಿಸಂಖ್ಯೆಗಳು ಬೇಡ. ಹೂಳು ತೆಗೆಯುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಯಾವಾಗ ಮಾಡುತ್ತೀರಿ ಎನ್ನುವುದನ್ನು ಹೇಳಿದರೆ ಸಾಕು. ಅಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು. ಒಂದು ಸಾರಿ ಇಲ್ಲಿ ಪ್ರಶ್ನೆ ಬಂದಮೇಲೆ ಅದನ್ನು ಮುಂದೂಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ.ಪಿ. ಕೇಶವಮೂರ್ತಿ : ನಮ್ಮ ಸಣ್ಣನೀರಾವರಿ ಇಲಾಖೆಯಲ್ಲಿ ಎರಡು ವಿಭಾಗಗಳಿವೆ. ಒಬ್ಬರು ಬೆಂಗಳೂರಿನಲ್ಲಿ ಮುಖ್ಯ ಇಂಜಿನಿಯರ್ ಇದ್ದಾರೆ ಮತ್ತೊಬ್ಬರು ಬಿಜಾಪುರದಲ್ಲಿದ್ದಾರೆ. ಬೆಂಗಳೂರು ವಿಭಾಗದಿಂದ ಮಾಹಿತಿ ಬಂದಿದೆ. ಬಿಜಾಪುರದಿಂದ ಮಾಹಿತಿ ಬಂದಿಲ್ಲ ಆದ್ದರಿಂದ ಸ್ವಲ್ಪ ವೇಳೆಯನ್ನು ಕೇಳುತ್ತೇನೆ. ಮಾನ್ಯಸದಸ್ಯರಾದ ಯಡಿಯೂರಪ್ಪನವರು ಹೇಳಿದಹಾಗೆ ಹೂಳು ತೆಗೆಯುವ ಕಾರ್ಯಕ್ರಮ ಇದು ಸರ್ಕಾರದ ಒಂದು ಕಾರ್ಯಕ್ರಮವಿದೆ. ಈ ವರ್ಷದ ಅನುದಾನದಲ್ಲಿ ಅದಕ್ಕಾಗಿ 3 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಎಷ್ಟು ಮಾಡಿದ್ದೀರಿ, ಯಾವ್ಯಾವ ಕೆರೆಗಳನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಾರೆ,ಅದಕ್ಕಾಗಿ ಕಾಲಾವಕಾಶ ಕೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೆರೆಗಳನ್ನು ದುರಸ್ತಿ ಪಡಿಸಿದ್ದೀರಿ? ಹೂಳು ಎತ್ತುವುದಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ?

ಶ್ರೀ ಎಂ.ಪಿ. ಕೇಶವಮೂರ್ತಿ : ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೆ ಬಿಜಾಪುರದಿಂದ ಉತ್ತರ ಬರಬೇಕಾಗಿದೆ. ಅದನ್ನು ತರಿಸಿಕೊಡುತ್ತೇನೆ.